

ಎಡದಿಂದ ಬಲಕ್ಕೆ

1. ಆಪ್ತರನ್ನು ಕಳೆದುಕೊಂಡಿರುವ ಅವನಿಗೆ ಈಗ ಬರೀ ದುಃಖ 4
3. ಕೇಳುವವರೇ ಇಲ್ಲವಾದರೆ ಊಟ ಸಿಗುವುದು ಹೇಗೆ? 3
4. ತೃಪ್ತಿ ಇಲ್ಲದವನ ಮನದ ತುಂಬ ಸದಾ ಪರಿತಾಪ 3
6. ಇಂಥ ಪದಕಗಳನ್ನು ಕೊಳ್ಳಲು ಕಳ್ಳ ಹಣವೇ ಬೇಕು 4
7. ಬಂದೂಕದ ನೆರಳಿನಲ್ಲೇ ನಡೆದಿದೆ ಅಲ್ಲಿನ ಜನರ ಜೀವನ 3
9. ಆಕೆಯ ಹಾವ ಭಾವಗಳಿಗೆ ಒಪ್ಪುವಂತಿರುವ ಪಾದರಕ್ಷೆ ಹೇಗೆ ? 3
11. ಸಾಲಗಾರರ ಕೈ ಸೇರಿತು ಎಲ್ಲ ಮಾವಿನ ಹಣ್ಣು 3
13. ಮಿತಿ ಮೀರಿದ ಮಹಾ ಗಾತ್ರದ ತಿಮಿಂಗಿಲ ನೋಡಿದಿರಾ? 3
15. ದಿನಗೂಲಿಯೂ ಸಿಗದ ಕಷ್ಟವನ್ನು ನೆನೆದು ಸಂಕಟ, ಕಳವಳ 4
17. ಆ ಗೋಡೆಗೆ ತೂಗುಹಾಕಿರುವುದ ಮಡಿಕೆಯೇ ತಾನೇ? 3
18. ಮಾವನಿಗೆ ಪ್ರಿಯನಾದ ಅವತಾರ ಪುರುಷ ಈ ಮಹಾ ಕುಳ್ಳ 3
19. ತಪ್ಪೆಲ್ಲವನ್ನೂ ಕಳೆದುಕೊಳ್ಳಲು ತಾಪಸಿಗಳ ನೆಲೆ ಸೇರಿದ 4

ಮೇಲಿಂದ ಕೆಳಕ್ಕೆ

1. ಅಳತೆ ಕೆಡಿಸಿ ಹೊಲಿದ ಉಡುಗೆ ತುಂಬ ದೊಗಲೆ 3
2. ತಪ್ಪನ್ನು ಸರಿಪಡಿಸದೇ ಇದ್ದರೆ ಇಂಥ ದುರ್ದೆಶೆ ತಪ್ಪದು 3
3. ಸುಂದರ ಕುದುರೆ ಹೌದಾದರೂ ಬಣ್ಣ ಮಾತ್ರ ಕಪ್ಪು 3
5. ಒಳ್ಳೆಯ ಮನವಿದ್ದಲ್ಲಿ ಮಾತ್ರವೇ ಸಾಧ್ಯ ಸಂತಸ 3
7. ಬಂಡೆ ಒಡೆಯುವವರ ಮುಂದೆ ಏಕೆ ಈ ಪರಿಯ ಜಂಭ? 4
8. ಜಗಳದಲ್ಲಿ ಕೂಗಾಡಿ ಎರಚಿದ್ದು ಸುಡುಸುಡುವ ನೀರು 4
9. ಹೊಸ ತರಗತಿಗೆ ಸೇರಿದವರನ್ನು ನಗಿಸಲು ಬಂದ ವಿದೂಷಕಿ 4
10. ಕಾಣೆಯಾಗಿರುವವರಲ್ಲೇ ಒಬ್ಬ ಆತನ ಸ್ನೇಹಿತ 4
12. ಗಳಿಸಿದ್ದನ್ನೆಲ್ಲ ಕಸಿದು ಸಾಗಿಸಿದವ ಕಡ ನೀಡಿದ ವ್ಯಕ್ತಿ 3
14. ಮಲೆ ಏರಿ ಬಂದವನೊಡನೆ ಸಂತಸದ ಸಮಾಗಮ 3
15. ನೊಗ ಹೊತ್ತ ಎತ್ತಿನ ಜೊತೆಗೆ ಇದೆಂಥ ಹಾರಾಟ! 3
16. ದೇವಾದಿದೇವನ ಕೃಪೆಯಿಂದ ಆತ ಮಂತ್ರಿ ಆಗಿದ್ದಾನೆ 3

21–10–2021 ಉತ್ತರಗಳು

ಎಡದಿಂದ ಬಲಕ್ಕೆ

1.ಅಸ್ತಮಾನ 3.ಪ್ರಕಾಶ 4.ಗರಿಮೆ 6.ನಮಸ್ಕಾರ 7.ಅರುಂಧತಿ 8. ಸಾಗುವಳಿ 10. ತಡಸಲು 12. ಪ್ರತಿಬಿಂಬ 14. ಪರಾಕ್ರಮ 16. ಕುಲಾವಿ 17. ಹೇಳನ (=ಅವಹೇಳನ) 18. ತ್ರಯೋದಶ (=13)

ಮೇಲಿಂದ ಕೆಳಕ್ಕೆ

1. ಅಶನ 2. ನಗರ 3. ಪ್ರಸಾಧನ 5. ಮೆರಗು 7. ಅಸಮ್ಮತ 9. ಳಿವಳುಬ (=ಬಳುವಳಿ ತಲೆಕೆಳಗು)11.ಸರಕು 13.ಮತಿಹೀನ 14.ಪವಿತ್ರ 15. ಮಹೇಶ

ಪ್ರಶ್ನಾಂಕಣ

ಭೂಮಿ ಮಂಕಾಗುತ್ತಿದೆ ಏಕೆ?

ಇದು ಅತ್ಯಂತ ಇತ್ತೀಚಿನ ಒಂದು ಶೋಧ; ಈ ಅಧ್ಯಯನದ ವರದಿ ಕೆಲ ದಿನಗಳ ಹಿಂದಷ್ಟೇ ಪ್ರಕಟವಾಗಿದೆ. ಆ ಪ್ರಕಾರ ನಮ್ಮ ಭೂಮಿಯ ಹೊಳಪು ಕಳೆದ ಮೂರು ವರ್ಷಗಳಿಂದ ಈಚೆಗೆ ದಿನೇ ದಿನೇ ಕಡಿಮೆಯಾಗುತ್ತಿದೆ. ನೆಲ, ಕಡಲು, ಮುಗಿಲುಗಳಿಂದ ಸೂರ್ಯನ ಬೆಳಕನ್ನು ಅಂತರಿಕ್ಷಕ್ಕೆ ಪ್ರತಿಫಲಿಸುತ್ತಿರುವ (ಚಿತ್ರ 2) ಈ ಸುರಸುಂದರ 'ನೀಲಿ ಗೋಲಿ'ಯ ಕಾಂತಿ ಬಾಹ್ಯಾಕಾಶದಿಂದ ಕಾಣುವಂತೆ (ಚಿತ್ರ1) ಕ್ರಮೇಣ ತಗ್ಗುತ್ತಿದೆ! ಭೂಮಿಯ 'ಪ್ರತಿಫಲನಾ ಸಾಮರ್ಥ್ಯ' ಶೇಕಡ 30 ರಷ್ಟು ಇದ್ದದ್ದು ಕಳೆದ ಕೆಲ ವರ್ಷಗಳಲ್ಲಿ ಶೇಕಡ 0.5 ರಷ್ಟು ಕಡಿಮೆಯಾಗಿದೆ! ಆತಂಕ ಏನೆಂದರೆ, ಮಾನವ ಜನ್ಯ ಸಮಸ್ಯೆಯಾದ 'ಭೂ ತಾಪ ಏರಿಕೆ'ಯಿಂದಲೇ ಜನ್ಮ ತಳೆದಿರುವ ಈ ವಿದ್ಯಮಾನ ಅದೇ ಸಮಸ್ಯೆಯನ್ನೇ ಮತ್ತಷ್ಟು ತೀವ್ರಗೊಳಿಸುತ್ತಿದೆ. ಹಾಗಾಗಿ ಅದೊಂದು ಜಟಿಲ 'ವಿಷ ವೃತ್ತ'ವಾಗಿದೆ.

ಭೂಮಿಯ ಹೊಳಪು ಕಡಿಮೆಯಾಗುತ್ತಿರಲು ಕಾರಣ ಮತ್ತು ಅದರ ಪರಿಣಾಮ ಏನು?

ನಿಮಗೇ ತಿಳಿದಿರುವಂತೆ ಜಗದಾದ್ಯಂತ ಕಿಕ್ಕಿರಿದಿರುವ ಕೈಗಾರಿಕೆಗಳು ಮತ್ತಿತರ ಮಾನವ ಚಟುವಟಿಕೆಗಳು ವಾಯುಮಂಡಲಕ್ಕೆ ಅಪಾರ ಪ್ರಮಾಣದ 'ಹಸಿರು ಮನೆ ಅನಿಲ'ಗಳನ್ನು ತುಂಬುತ್ತಿವೆ. ತತ್ಪರಿಣಾಮವಾಗಿ ಭೂ ಮೇಲ್ಮೈನ ತಾಪ ಪ್ರಸ್ತುತ 15 ಡಿಗ್ರಿ ಸೆಲ್ಸಿಯಸ್ ಮುಟ್ಟಿದೆ. ಭೂ ಸ್ವಾಸ್ಥ್ಯದಲ್ಲಿ ಅತ್ಯಂತ ಸೂಕ್ಷ್ಮವಾದ ಮತ್ತು ನಿರ್ಣಾಯಕವಾದ ಪಾತ್ರವನ್ನು ಹೊಂದಿರುವ ಈ ಭೂ ತಾಪ ಕೈಗಾರಿಕೀಕರಣದ ಹಿಂದೆ ಇದ್ದ 13.8 ಡಿಗ್ರಿ ಸೆಲ್ಸಿಯಸ್‌ಗಿಂತ 1.2 ಡಿಗ್ರಿಯಷ್ಟು ಅಧಿಕಗೊಂಡಿದೆ. ಈ ಹೆಚ್ಚಳ 1.5 ಡಿಗ್ರಿಯನ್ನು ಮೀರಿದರೆ ಭೂ ಪರಿಸರವನ್ನು ಸಾರಾಸಗಟು ಹಾಳುಗೆಡಹುವ ಏರುಪೇರುಗಳು ನಿಶ್ಚಿತ. ಈಗಾಗಲೇ ಅಂತಹ ಹಲವಾರು ವಿಪತ್ಕಾರೀ ತಳಮಳಗಳು ಆರಂಭಗೊಂಡಿವೆ ಕೂಡ. 'ಹಿಮರಾಶಿಗಳ ಕರಗುವಿಕೆ, ಸಾಗರ ಮಟ್ಟದ ಏರಿಕೆ, ಋತುಮಾನಗಳ ಏರುಪೇರು, ಬರ ಮಹಾಪೂರಗಳ ಹಾವಳಿ, ಕಾಳ್ಗಿಚ್ಚುಗಳ ಹೆಚ್ಚಳ, ಚಂಡಮಾರುತಗಳ ಸಂಖ್ಯೆ ಮತ್ತು ತೀವ್ರತೆಗಳ ಅಧಿಕ್ಯ, ಅಂಟುಜಾಡ್ಯಗಳ ದಾಳಿ... ಇತ್ಯಾದಿ'. ಇದೇ ಭೂ ತಾಪ ಏರಿಕೆಯೇ ಭೂಮಿಯ ಹೊಳಪನ್ನು ಕಡಿಮೆ ಮಾಡುತ್ತಿದೆ ಕೂಡ. ಹೇಗೆಂದು ಗಮನಿಸಿ:



ಭೂ ತಾಪದ ಏರಿಕೆಯಿಂದಾಗಿ ಸಹಜವಾಗಿಯೇ ಕಡಲಿನ ನೀರು ಹೆಚ್ಚು ಹೆಚ್ಚು ಬೆಚ್ಚಗಾಗುತ್ತಿದೆ. ಅದರಿಂದಾಗಿ ಸಾಗರಾವಾರದಿಂದ ಮೇಲೇಳುವ 'ಸ್ಟ್ರಾಟೋ ಕ್ಯುಮ್ಯುಲಸ್' ವರ್ಗದ ದಟ್ಟ ಮೋಡಗಳು ಕಡಿಮೆಯಾಗುತ್ತಿವೆ. ವಾಯು ಮಂಡಲದಲ್ಲಿ ತೇಲುತ್ತ ಸೂರ್ಯ ರಶ್ಮಿಯನ್ನು ಗರಿಷ್ಠ ಪ್ರಮಾಣದಲ್ಲಿ ಪ್ರತಿಫಲಿಸುವ ಇಂತಹ ಮೋಡಗಳ ಕೊರತೆಯಿಂದಾಗಿ ಹೆಚ್ಚು ಬೆಳಕು ಭೂ ಮೇಲ್ಮೈ ಅನ್ನು ತಲುಪುತ್ತಿದೆ; ಭೂ ಹೊಳಪು ಕಡಿಮೆಯಾಗುತ್ತಿದೆ. ಜೊತೆ ಜೊತೆಗೇ ಭೂ ತಾಪ ಏರಿಕೆಯ ಸಮಸ್ಯೆಯೂ ತೀವ್ರವಾಗುತ್ತಿದೆ.

■ ಎನ್. ವಾಸುದೇವ್